**<u>ದಿನಾಂಕಃ 22.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಪಿರ್ಯಾದುದಾರರ ಪರ ಶ್ರೀ. ಹೆಚ್.ಬಿ.ಎಸ್. ವಕೀಲರಿಂದಃ-</u>

1) ನಾನು ಬಿ.ಎ ಪದವೀಧರ. ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿಸಿ 1516/2022 ಪ್ರಕರಣ ದಾಖಲಾಗಿದೆ ಎಂದರೆ ಸರಿ. ಪಿರ್ಯಾದುದಾರರು ನನಗೆ ಚೆನ್ನಾಗಿ ಪರಿಚಯಸ್ಥರು ಎಂದರೆ ಸರಿಯಲ್ಲ. ನಾನು ಮತ್ತು ಪಿರ್ಯಾದುದಾರರು ದಿಃ12.08.2022 ರಂದು ಒಂದು ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಸಿಸಿ 1517/2022 ಪ್ರಕರಣದಲ್ಲಿ ನಿಂಗೇಗೌಡರಿಗೆ ನಾನು 9 ಲಕ್ಷ ಹಣ ನೀಡಬೇಕು ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಜಯರಾಜುರವರ ಬಳಿ ನಾನು ಚೀಟಿ ಹಾಕಿದ್ದೇ ಎಂದರೆ ಸರಿ. ಚೀಟಿ ವ್ಯವಹಾರ ನಡೆಸಲು ಪರವಾನಿಗೆ ಇರಬೇಕು ಎಂಬುದರ ಬಗ್ಗೆ ನನಗೆ ಗೊತ್ತಿರಲಿಲ್ಲ. ಅಂತವರ ಬಳಿ ಚೀಟಿ ಹಾಕಿದರೆ ಅಪರಾಧ ಎಂಬುದರ ಬಗ್ಗೆ ಸಹಾ ನನಗೆ ಅರಿವಿಲ್ಲ. ಸದರಿ ಜಯರಾಜು ರವರ ಬಳಿ ಎಷ್ಟ್ಯು ಜನ ಚೀಟಿ ಹಾಕಿದ್ದರು ಎಂಬುದರ ಬಗ್ಗೆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಎಷ್ಟು ಮೊತ್ತದ ಚೀಟಿ ಹಾಗೂ ಎಷ್ಟು ಜನ ಚೀಟಿ ಹಾಕಿದ್ದರು ಎಂಬ ಬಗ್ಗೆ ಸಹಾ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2) ದಿಃ12.08.2022 ರಂದು ನನ್ನ ಮತ್ತು ಪಿರ್ಯಾದುದಾರರ ನಡುವೆ ಆಗಿದೆ ಎಂದು ಹೇಳಲಾದ ಪತ್ರದಲ್ಲಿ ಸಹಿ ಮತ್ತು ಹೆಬ್ಬೆಟ್ಟು ನನ್ನದಲ್ಲ. ಜಯರಾಜುರವರ ಬಳಿ ನಾನು ನೀಡಿದ್ದ 3 ಚೆಕ್ಕುಗಳು ಮತ್ತು ಮೂರು ಛಾಪಾಕಾಗದಗಳನ್ನು ವಾಪಸ್ಸು ಕೇಳಿದ್ದೆ. ಆದರೆ ಆಮೇಲೆ ಕೊಡುತ್ತೇನೆ ಎಂದು ಹೇಳಿದ್ದರು. ಸದರಿ ಪತ್ರವು ನಾನೇ ಬರೆದು ಸಹಿ ಮಾಡಿ ಕೊಟ್ಟಂತಹ ಪತ್ರ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಇರುವ ಒಕ್ಕಣೆ ನನ್ನದಲ್ಲ. ನಿಪಿ.1

ರಲ್ಲಿರುವ ಸಹಿ ನಿಪಿ.1 ಎ ನನ್ನದೇ. ನಿಪಿ.1 ಚೆಕ್ ಪಿರ್ಯಾದುದಾರರಿಗೆ ಜಯರಾಜು ರವರ ಮೂಲಕ ಸೇರಿದೆ. ನಿಪಿ.1 ಅನ್ನು ನಾನು ಪಿರ್ಯಾದುದಾರರಿಗೆ ನೀಡಿರುವುದು ಎಂದರೆ ಸರಿಯಲ್ಲ. ನೀವು ಜಯರಾಜುರವರಿಗೆ ನೀಡಿದ ವಿವಾದಿತ ಚೆಕ್ಕ್ ಪಿರ್ಯಾದುದಾರರ ಬಳಿ ಹೇಗೆ ಹೋಯಿತು ಎಂದರೆ ನನಗೆ ಗೊತ್ತಿಲ್ಲ. ನಾನು ಪಿರ್ಯಾದುದಾರರಿಂದ ಹಣ ಪಡೆದುಕೊಂಡು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ವಿವಾದಿತ ಚೆಕ್ ಕಳೆದುಹೋದ ಬಗ್ಗೆ ಅಥವಾ ಜಯರಾಜುರವರಿಂದ ನಿಂಗೇಗೌಡರ ಬಳಿ ಹೋದ ಸಂದರ್ಭದಲ್ಲಿ ಸದರಿ ಚೆಕ್ಕನ್ನು ಸ್ಟಾಪ್ ಪೇಮೆಂಟ್ ಮಾಡಿಸಲು ನನಗೆ ಯಾವುದೆ ತೊಂದರೆ ಇರಲಿಲ್ಲ. ನಾನು ಪಿರ್ಯಾದು ದಾರರಿಗೆ ಮೋಸ ಮಾಡುವ ಉದ್ದೇಶದಿಂದ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ